ಟೊಮ್ಯಾಟೊ ರಸದ ಮಿಶ್ರಣ ಬಳಸಬೇಕು.

- ಮೊಡವೆಗಳ ನಿವಾರಣೆಗೆ ಹುಣಸೆ ರಸದ ಜೊತೆ ತುಳಸಿಯ ರಸವನ್ನು ಹಾಕಿ ಹಚ್ಚಿ 15 ನಿಮಿಷದ ನಂತರ ಬೆಚ್ಚಗಿನ ನೀರಿನಿಂದ ತೊಳೆಯಿರಿ.
- ಹುಣಸೆಯ ರಸವನ್ನು ನಿತ್ಯವೂ ಮುಖಕ್ಕೆ ಹಚ್ಚಿದರೆ ನೈಸರ್ಗಿಕ ಬ್ಲೀಚಿನಂತೆ ಕೆಲಸ ಮಾಡುತ್ತದೆ.
- 2 ಚಮಚ ತೆಂಗಿನ ನೀರಿಗೆ ಅಷ್ಟೇ ಪ್ರಮಾಣದಲ್ಲಿ ಹುಣಸೆ ರಸ ಹಾಕಿ ಪ್ರತಿ ದಿನ ಲೇಪಿಸಿದರೆ ತ್ವಚೆ ಹೊಳೆಯುವುದು.
- 4 ಚಮಚ ಕಲ್ಲಂಗಡಿ ಹಣ್ಣಿನ ರಸ ಹಾಗೂ 2 ಚಮಚ ಹುಣಸೆ ರಸದ ಮಿಶ್ರಣ ತ್ವಚೆಯ ತೇವಾಂಶ ಕಾಪಾಡುತ್ತದೆ.
- ಚರ್ಮ ಒರಟಾಗಿದ್ದರೆ 2 ಚಮಚ ಹುಣಸೆ ರಸ ಮತ್ತು ಅರ್ಧ ಚಮಚ ಆಲಿವ್ ತೈಲ ಸೇರಿಸಿ ಪ್ರತಿ ರಾತ್ರಿ ಮುಖಕ್ಕೆ ಹಚ್ಚಿ ಬೆಳಗಾದ ಮೇಲೆ ಬೆಚ್ಚಗಿನ ನೀರಿನಿಂದ ತೊಳೆದರೆ ಒರಟುತನ ಹೋಗುತ್ತದೆ.
- ಆಲೂಗೆಡ್ಡೆಯನ್ನು ಅರೆದು ಅದರ ರಸವನ್ನು ತೆಗೆಯಿರಿ. ಅದಕ್ಕೆ ಒಂದು ಚಮಚ ಹುಣಸೆ ನೀರು ಹಾಕಿ ಲೇಪಿಸಿ ಪ್ರತಿ ದಿನ ಹೀಗೆ ಮಾಡಿದರೆ ಸನ್‌ಟ್ಯಾನ್ ಆಗಿರುವ ಚರ್ಮ ತನ್ನ ನೈಸರ್ಗಿಕ ಬಣ್ಣವನ್ನು ಮರಳಿ ಪಡೆಯಬಹುದು.
- ಹುಣಸೆ ಬೀಜವನ್ನು ಪುಡಿ ಮಾಡಿ ನೀರಿನಲ್ಲಿ ಹಾಕಿ ಕುದಿಸಿ ಇಟ್ಟುಕೊಳ್ಳಿ. ತಣ್ಣಗಾದ ಬಳಿಕ ಸೋಸಿ ಆ ನೀರಿನಿಂದ ಮುಖ ತೊಳೆದುಕೊಂಡರೆ ಸೂರ್ಯನ ಅತಿನೇರಳೆ ಕಿರಣಗಳಿಂದ ಚರ್ಮವನ್ನು ರಕ್ಷಿಸಬಹುದು.

### ಹುಣಸೆ ಹೇರ್ ಟಾನಿಕ್

- ಆಲೋವೆರಾ ರಸ (4 ದೊಡ್ಡ ಚಮಚ) ಹಾಗೂ ಹುಣಸೆ ರಸವನ್ನು ತಲೆಗೆ ಹಚ್ಚಿ 15 ನಿಮಿಷ ಬಿಟ್ಟು ತಲೆ ಸ್ನಾನ ಮಾಡಿದರೆ ಕೂದಲ ಬುಡ ದೃಢವಾಗುವುದು.
- ಅರ್ಧ ಬಟ್ಟಲು ಹುಣಸೆ ರಸದ ಜೊತೆ 4 ಚಮಚ ತೆಂಗಿನ ಹಾಲನ್ನು ಹಾಕಿ ಹಚ್ಚಿ 10 ನಿಮಿಷ ಆದ ಮೇಲೆ ಸ್ನಾನ ಮಾಡುವುದರಿಂದ ಕೂದಲು ಸೊಂಪಾಗಿ ಬೆಳೆಯುತ್ತದೆ.
- 3 ಚಮಚ ಹುಣಸೆ ರಸ ಹಾಗೂ 2 ಚಮಚ ಸೂರ್ಯಕಾಂತಿ ಎಣ್ಣೆ ಸೇರಿಸಿ ಹಚ್ಚುವುದರಿಂದ ಕೂದಲನ್ನು ಮೃದುವಾಗಿಸಬಹುದು.
- 3 ದೊಡ್ಡ ಚಮಚ ಹಾಲಿನ ಕೆನೆಗೆ ಕಾಲು ಬಟ್ಟಲು ಹುಣಸೆ ರಸ ಬೆರೆಸಿ ನೈಸರ್ಗಿಕ ಹೇರ್ ಕಂಡೀಷನರ್ ಆಗಿ ಉಪಯೋಗಿಸಿ.
- ಹುಣಸೆ ರಸ, ಕಿತ್ತಳೆ ರಸ ಹಾಗೂ ಸೌತೆ ರಸವನ್ನು ಸಮಪ್ರಮಾಣದಲ್ಲಿ ಬೆರೆಸಿ ಹಚ್ಚಿ 20 ನಿಮಿಷ ಆದ ಬಳಿಕ ತೊಳೆಯಬೇಕು. ಇದು ತೈಲಮಯ ಕೂದಲಿಗೆ ಸೂಕ್ತವಾದ ಹೇರ್ ಟಾನಿಕ್.
- ಸ್ವಲ್ಪ ನೀರುಳ್ಳಿ ರಸ, 2 ಚಮಚ ಮೊಸರನ್ನು ಹುಣಸೆ ರಸದೊಂದಿಗೆ ಸೇರಿಸಿ ಉಪಯೋಗಿಸಿದರೆ ಕೂದಲು ತುಂಡಾಗುವುದಿಲ್ಲ.

### ಆ್ಯಂಟಿ ಏಜಿಂಗ್ ಸ್ಕ್ರಬ್

- ಹುಣಸೆಯನ್ನು ಬಿಸಿ ನೀರಿನಲ್ಲಿ ಹಾಕಿ ಅದು ಮೆತ್ತಗಾದ ನಂತರ ಬೇಕಿಂಗ್ ಸೋಡಾ, ಸಕ್ಕರೆ ಹಾಗೂ ನಿಂಬೆ ರಸವನ್ನು ಸೇರಿಸಿ ಮುಖಕ್ಕೆ ನಿಧಾನವಾಗಿ ಮಾಲೀಶು ಮಾಡುತ್ತ ಹಚ್ಚಿ. 2 ನಿಮಿಷ ಬಿಟ್ಟು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದರಿಂದ ಸುಕ್ಕುಗಳು ಕಡಿಮೆಯಾಗುತ್ತವೆ.
- ಹುಣಸೆ ಹಣ್ಣಿಗೆ 2 ಚಮಚ ಮೊಸರು, 2 ಚಮಚ ಗುಲಾಬಿ ಜಲ, ಒಂದು ಚಮಚ ಅಕ್ಕಿ ಹಿಟ್ಟು ಸೇರಿಸಿ, ಒಂದು ನಿಮಿಷ ಮುಖವನ್ನು ಸ್ಕ್ರಬ್ ಮಾಡಿದರೆ ತ್ವಚೆ ನುಣುಪಾಗುತ್ತದೆ.
- ಹುಣಸೆ ರಸ, ರವೆ ಹಾಗೂ ಹಾಲಿನ ಮಿಶ್ರಣ ಒಣ ಚರ್ಮದವರಿಗೆ ಒಳ್ಳೆಯ ಸ್ಕ್ರಬ್.
- ಪುಡಿ ಮಾಡಿದ ಹುಣಸೆ ಬೀಜವನ್ನು ಪಪ್ಪಾಯಿ ತಿರುಳಿನೊಂದಿಗೆ ಪೇಸ್ಟ್ ಮಾಡಿ ಸ್ಕ್ರಬ್ ಮಾಡಿ ಇದರಿಂದ ತ್ವಚೆಗೆ ಬೇಕಾದ ಪೋಷಕಾಂಶ ದೊರೆಯುವುದರ ಜೊತೆಗೆ ಚರ್ಮ ಶುಭ್ರವಾಗುತ್ತದೆ.
- ತ್ವಚೆಯಲ್ಲಿ ಜಿಡ್ಡಿನಂಶ ಹೆಚ್ಚಾಗಿದ್ದರೆ ಹುಣಸೆ ಹಣ್ಣಿನ ಜೊತೆಗೆ ಸ್ವಲ್ಪ ಉಪ್ಪು, ನಿಂಬೆ ರಸ ಹಾಗೂ ಟೊಮ್ಯಾಟೊ ರಸ ಸೋಸಿ ಬಳಸಿ.
- ಕೈಕಾಲುಗಳ ಚರ್ಮ ಒರಟಾಗಿದ್ದರೆ 2 ಚಮಚ ಬೆಣ್ಣೆ, 3 ಚಮಚ ಹುಣಸೆ ರಸ, 4 ಚಮಚ ಹುಣಸೆ ಬೀಜದ ಪುಡಿ ಸೇರಿಸಿ ಬಾಡಿ ಸ್ಕ್ರಬ್ ಮಾಡಿಕೊಳ್ಳಬಹುದು. ವಾರಕ್ಕೆ 2 ಬಾರಿ ಈ ಬಾಡಿ ಸ್ಕ್ರಬ್ ಉಪಯೋಗಿಸುವುದು ಉತ್ತಮ.

■




ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ "ಶ್ರೀ ಮಂಜುನಾಥ ಗುರೂಜಿ" ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ

9886999747